# ದೇವರಕೋಣೆ ಮತ್ತು ಪೂಜೆಯ ಉಪಕರಣಗಳು

## ಮನೋಗತ

ಭಕ್ತಿಮಾರ್ಗದಿಂದ ಈಶ್ವರಪ್ರಾಪ್ತಿಗಾಗಿ ಉಪಾಸನೆ (ಸಾಧನೆ)ಯನ್ನು ಮಾಡುವವರ ದೃಷ್ಟಿಯಿಂದ ಒಂದು ಮಹತ್ವದ ಉಪಾಸನೆ ಎಂದರೆ ದೇವರ ಪೂಜೆ. ದೇವರ ಪೂಜೆಗಾಗಿ ಮನೆಯಲ್ಲಿ ದೇವರಕೋಣೆಯಿರುವುದು ಆವಶ್ಯಕವಾಗಿದೆ. ಇತ್ತೀಚೆಗೆ ಹೆಚ್ಚಿನವರ ಮನೆಗಳಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅಥವಾ ತೋರಿಕೆಗಾಗಿ ದೇವರಕೋಣೆಯನ್ನು ಮಾಡಲಾಗುತ್ತದೆ. ದೇವರಕೋಣೆಯನ್ನು ಮಾಡುವುದರ ಹಿಂದೆ ಯಾವ ಶಾಸ್ತ್ರೀಯ ದೃಷ್ಟಿಕೋನವನ್ನಿಟ್ಟುಕೊಳ್ಳಬೇಕು ಎಂಬುದರ ಬಗ್ಗೆ ಹೆಚ್ಚಿನವರು ವಿಚಾರ ಮಾಡುವುದಿಲ್ಲ. ಅಧ್ಯಾತ್ಮದಲ್ಲಿನ ಪ್ರತಿಯೊಂದು ಕೃತಿಯನ್ನು ವಿಶಿಷ್ಟ ಪದ್ಧತಿಯಲ್ಲಿ ಮಾಡುವುದರ ಹಿಂದೆ ಏನಾದರೊಂದು ಶಾಸ್ತ್ರವಿರುತ್ತದೆ. ಪ್ರತಿಯೊಂದು ಕೃತಿಯನ್ನು ಶಾಸ್ತ್ರಕ್ಕನುಸಾರ ಮಾಡಿದಲ್ಲಿ ಮಾತ್ರ ಆ ಕೃತಿಯಿಂದ ಹೆಚ್ಚಿನ ಆಧ್ಯಾತ್ಮಿಕ ಲಾಭವು ಸಿಗುತ್ತದೆ. ಈ ಉದ್ದೇಶದಿಂದಲೇ ಈ ಕಿರುಗ್ರಂಥದಲ್ಲಿ ದೇವರಕೋಣೆಯು ಯಾವ ದಿಕ್ಕಿನಲ್ಲಿರಬೇಕು, ದೇವರ ಕೋಣೆಯ ಬಣ್ಣ, ರೂಪ ಮತ್ತು ಆಕಾರ ಹೇಗಿರಬೇಕು, ದೇವರಕೋಣೆಯಲ್ಲಿ ದೇವರ ಜೋಡಣೆಯನ್ನು ಯಾವ ರೀತಿಯಲ್ಲಿ ಮಾಡಬೇಕು ಇತ್ಯಾದಿ ವಿಷಯಗಳ ಅಧ್ಯಾತ್ಮಶಾಸ್ತ್ರೀಯ ಮಾಹಿತಿಯನ್ನು ನೀಡಲಾಗಿದೆ.

ಹರಿವಾಣ, ಅರಿಶಿನ-ಕುಂಕುಮಗಳ ಡಬ್ಬಿ,

ನೀಲಾಂಜನ, ಗಂಟೆ, ಕಾಲುದೀಪ ಮುಂತಾದ ಉಪಕರಣಗಳು ದೇವತೆಯ ಕೃಪೆಯನ್ನು ಪಡೆದುಕೊಳ್ಳಲು ಸಹಾಯ ಮಾಡುತ್ತವೆ. ದೇವರ ಪೂಜೆಯನ್ನು ಆರಂಭಿಸುವ ಮೊದಲು ಈ ಉಪಕರಣಗಳನ್ನು ವಿಶಿಷ್ಟ ರೀತಿಯಲ್ಲಿ ಜೋಡಣೆ ಮಾಡಿದರೆ ಪೂಜಾವಿಧಿಯಿಂದ ದೇವತೆಯ ತತ್ತ್ವದ ಲಾಭವು ಹೆಚ್ಚು ಪ್ರಮಾಣದಲ್ಲಿ ಹೇಗೆ ಮತ್ತು ಏಕೆ ಸಿಗುತ್ತದೆ ಎನ್ನುವುದರ ಅಧ್ಯಾತ್ಮಶಾಸ್ತ್ರೀಯ ಮಾಹಿತಿಯನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ದೇವರ ಪೂಜೆಯಲ್ಲಿನ ಉಪಕರಣಗಳ ಮಹತ್ವವನ್ನು ತಿಳಿದುಕೊಂಡಲ್ಲಿ ಅವುಗಳ ಬಗ್ಗೆ ಭಾವ ನಿರ್ಮಾಣವಾಗಲು ಸಹಾಯವಾಗುತ್ತದೆ. ಅಂತಃಕರಣದಿಂದ ದೇವರ ಪೂಜೆಯನ್ನು ಮಾಡಿದರೆ ಅದು ಭಾವಪೂರ್ಣವಾಗುತ್ತದೆ. ದೇವರ ಪೂಜೆಯು ಭಾವಪೂರ್ಣವಾದರೆ ದೇವತೆಯ ತತ್ತ್ವದ ಲಾಭವು ಅಧಿಕ ಪ್ರಮಾಣದಲ್ಲಾಗುತ್ತದೆ. ಆದುದರಿಂದ ಈ ಕಿರುಗ್ರಂಥದಲ್ಲಿ ದೇವರ ಪೂಜೆಯಲ್ಲಿನ ಉಪಕರಣಗಳ ಅಧ್ಯಾತ್ಮಶಾಸ್ತ್ರೀಯ ಮಹತ್ವ ಮತ್ತು ವೈಶಿಷ್ಟ್ಯಗಳನ್ನೂ ನೀಡಲಾಗಿದೆ.

ಈ ಕಿರುಗ್ರಂಥದಲ್ಲಿ ಕೊಡಲಾಗಿರುವ ಶಾಸ್ತ್ರವನ್ನು ತಿಳಿದುಕೊಂಡು ಕೃತಿ ಮಾಡುವವರಿಗೆ ಈಶ್ವರೀ ತತ್ತ್ವದ ಅತ್ಯಧಿಕ ಲಾಭ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. - **ಸಂಕಲನಕಾರರು**

# ಅನುಕ್ರಮಣಿಕೆ


卐 ಸಾಧಕರಿಗೆ ಸಿಗುವ ಜ್ಞಾನವು ಅವರ ಅಧ್ಯಾತ್ಮದಲ್ಲಿನ ಪ್ರತಿಭೆ ಜಾಗೃತವಾಗಿರುವುದರ ಅನುಭೂತಿ ! ೭

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ಪ್ರಸ್ತಾವನೆ ! ೯

卐 ಮನೋಗತ ೧೧

---

೧. ದೇವರಕೋಣೆ / ಮಂಟಪ ಯಾವ ದಿಕ್ಕಿನಲ್ಲಿರಬೇಕು ? ೧೩

೨. ದೇವರ ಮಂಟಪದ ಸ್ವರೂಪವು ಹೇಗಿರಬೇಕು ? ೧೪

೩. ದೇವರಕೋಣೆ / ಮಂಟಪದಲ್ಲಿ ದೇವರ ಜೋಡಣೆಯನ್ನು ಹೇಗೆ ಮಾಡಬೇಕು ? ೨೬

೪. ಪೂಜೆಯಲ್ಲಿನ ಉಪಕರಣಗಳನ್ನು ಯಾವ ಧಾತುವಿನಿಂದ ತಯಾರಿಸಬೇಕು ? ೩೬

೫. ದೇವರ ಪೂಜೆಗಾಗಿ ಹಳೆಯ ಉಪಕರಣಗಳನ್ನು ಏಕೆ ಉಪಯೋಗಿಸಬೇಕು ? ೩೮

೬. ದೇವರ ಪೂಜೆಯಲ್ಲಿ ಉಪಯೋಗಿಸುವ ಉಪಕರಣಗಳ ಅಧ್ಯಾತ್ಮಶಾಸ್ತ್ರೀಯ ಮಹತ್ವ ೩೯

೭. ದೇವರ ಪೂಜೆಯಲ್ಲಿನ ಘಟಕ ಮತ್ತು ಉಪಕರಣಗಳ ಜೋಡಣೆ ೫೯